# ವಿಶ್ವವಿದ್ಯಾಲಯ

ನಮ್ಮ ದೇಶವನ್ನು ಆಳಿದ ಬ್ರಿಟಿಷರು ಮದರಾಸು–ಕೋಲ್ಕತ್ತ ನಗರಗಳಲ್ಲಿ ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸಿದರು. ಅನಂತರ ಆಯಾಯ ಪ್ರಾಂತ್ಯದ ರಾಜರು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದರು. ಮೈಸೂರಿನ ನಾಲ್ವಡಿಯವರ ಕಾಲಕ್ಕೆ ಮೈಸೂರು ವಿಶ್ವವಿದ್ಯಾನಿಲಯವು ಅಸ್ತಿತ್ವಕ್ಕೆ ಬಂದಿತು. ಸಂಶೋಧನೆಯ ಉದ್ದೇಶಕ್ಕಾಗಿ ಮೈಸೂರು–ಪುಣೆ–ಬರೋಡಾ–ಕಲ್ಕತ್ತ–ಕಾಶಿ ಮುಂತಾದ ಕಡೆಗಳಲ್ಲಿ ಪ್ರಾಚ್ಯ ಸಂಶೋಧನಾಲಯಗಳು 19ನೆಯ ಶತಮಾನದ ಪ್ರಾರಂಭಕ್ಕೆ ಉದ್ಘಾಟನೆಯಾದವು. ಹಾಗೆ ನೋಡಿದರೆ, ಬ್ರಿಟಿಷ್ ವಸಾಹತು ಕಾಲದಲ್ಲಿ ಬಂದ ಯೂನಿವರ್ಸಿಟಿಗಳೇ ಭಾರತದ ಮೊದಲ ವಿಶ್ವವಿದ್ಯಾಲಯಗಳೆಂದು ಭಾವಿಸಿದ್ದಾರೆ. ಹಾಗೆಂದು ನಾವು ಯಾರೂ ಭಾವಿಸಬೇಕಿಲ್ಲ. ಕಳೆದ ಎರಡು ಸಾವಿರ ವರ್ಷಗಳ ಹಿಂದೆಯೇ ಭಾರತದಲ್ಲಿ ಪ್ರಾಚೀನ ವಿಶ್ವವಿದ್ಯಾಲಯಗಳು ಇದ್ದವು. ಅಲ್ಲಿ ವಿಶ್ವವಿದ್ಯೆಗಳನ್ನು ನೂರಾರು ವಿದ್ಯಾರ್ಥಿಗಳು ಕಲಿಯುತ್ತಿದ್ದರು. ಪ್ರಸಿದ್ಧವಾದ ನಳಂದ, ತಕ್ಷಶಿಲಾ, ವಿಕ್ರಮಶಿಲಾ ಮುಂತಾದ ವಿಶ್ವವಿದ್ಯಾಲಯಗಳು ನೂರಾರು ವಿದ್ಯಾರ್ಥಿಗಳನ್ನು ತಮ್ಮತ್ತ ಸೆಳೆದಿದ್ದವು – ಎಂಬುದು ಅಚ್ಚರಿಯಾದರೂ ಸತ್ಯಸ್ಯಸತ್ಯ. ನಾಲಂದ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಶಾಸನಗಳು, ಕಟ್ಟಡಗಳು, ನಾಣ್ಯಗಳು ಪ್ರಾಚ್ಯ ಸಂಶೋಧಕರಿಗೆ ದೊರಕಿವೆ. ಇವುಗಳ ಜತೆಗೆ ಚೀನೀ ಯಾತ್ರಿಕರ ಬರವಣಿಗೆಯಲ್ಲಿ ದಾಖಲಾಗಿರುವ ಸಂಗತಿಗಳು ಮಹತ್ತ್ವದ ವಿವರಗಳನ್ನು ನಮಗೆ ನೀಡುತ್ತವೆ.

ಬಿಹಾರದ ಪಾಟ್ನಾ ಮತ್ತು ರಾಜಗೀರ್ ಸಮೀಪ ನಾಲಂದ ಉಂಟು. ಇಂದು ಇದು ಸಣ್ಣಗ್ರಾಮ. ಈ ಗ್ರಾಮಕ್ಕೆ ನಾಲ, ನಾಲಕ ಎಂದೇ ಪುರಾತನ ಹೆಸರು. ಅಶೋಕನು ಇಲ್ಲಿ ಶಾರಿಪುತ್ರನಿಗೆ ವಿಹಾರವೊಂದನ್ನು ಕಟ್ಟಿಸಿಕೊಟ್ಟಿದ್ದ. ಇಂಥ ಜಾಗದಲ್ಲಿ ನಾಲಂದ ವಿಶ್ವವಿದ್ಯಾಲಯವು ವಿಶ್ವವಿದ್ಯೆಯನ್ನು ಹೇಳಿಕೊಡುವ ವಿದ್ಯಾಸಂಸ್ಥೆಯಾಗಿ ಬೆಳೆಯಿತು. ಗುಪ್ತರಾಜರು, ಹರ್ಷ ಮತ್ತು ಪಾಲರಾಜರು ಧಾರಾಳವಾಗಿ ಈ ವಿಶ್ವವಿದ್ಯಾಲಯಕ್ಕೆ ದಾನ ಮಾಡಿದರು. ಇಲ್ಲಿ ಸುತ್ತಮುತ್ತಲಿದ್ದ ನೂರು ಗ್ರಾಮಗಳಿಂದ ರಾಜನಿಗೆ ಸಂದಾಯವಾಗುತ್ತಿದ್ದ ಕಂದಾಯದ ಹಣ ನಾಲಂದ ವಿಶ್ವವಿದ್ಯಾಲಯಕ್ಕೆ ಕೊಡಲಾಗುತ್ತಿತ್ತು. ಈ ನಾಲಂದ ವಿಶ್ವವಿದ್ಯಾಲಯವು ಮೂರು ಮೈಲಿ ಉದ್ದ ಎರಡು ಮೈಲಿ ಅಗಲವಾಗಿತ್ತು. ಇಲ್ಲಿ ನಾಲ್ಕಾರು ವಿಹಾರಗಳು ಮತ್ತು ದೇವಾಲಯಗಳು ಇದ್ದವು. ಇದು ವಿಶ್ವವಿದ್ಯಾಲಯದ ಭೌತಿಕರೂಪ. ಈ ವಿಶ್ವವಿದ್ಯಾಲಯದಲ್ಲಿ ಪ್ರಕಾಂಡ ವಿದ್ವಾಂಸರಿದ್ದರು. ರಸವಿದ್ಯೆಯ ಬೌದ್ಧತಾರ್ಕಿಕ ನಾಗಾರ್ಜುನನು ಇಲ್ಲಿ ಆಚಾರ್ಯನಾಗಿದ್ದನೆಂದು ಹೇಳಿದರೆ, ವಿಶ್ವವಿದ್ಯಾಲಯದ ಖ್ಯಾತಿಯನ್ನು ನಾವು ಊಹಿಸಬಹುದು. ಇವನ ಜತೆ ಧರ್ಮಪಾಲ, ಪ್ರಭಾಕರಮಿತ್ರ, ಶೀಲಭದ್ರ, ಪದ್ಮಸಂಭವ, ಗುಣಮತಿ ಮುಂತಾದ ವಿದ್ವಾಂಸರು ವಿವಿಧ ಶಾಸ್ತ್ರಗಳನ್ನು ಕಲಿಸುತ್ತ ಇಲ್ಲಿದ್ದರು. ಇಲ್ಲಿ ಜೈನ, ಬೌದ್ಧ, ಯೋಗ, ವೈಶೇಷಿಕ, ಸಾಂಖ್ಯ, ವೇದಾಂತ, ಮೀಮಾಂಸ, ಚಾರ್ವಾಕ ಮುಂತಾದ ದರ್ಶನಗಳು ಇರುವಂತೆ; ತರ್ಕಶಾಸ್ತ್ರ, ಶಬ್ದಶಾಸ್ತ್ರ, ಔಷಧಿಶಾಸ್ತ್ರ, ಗಣಿತಶಾಸ್ತ್ರ, ಖಗೋಳವಿಜ್ಞಾನ, ಲೋಹಶಾಸ್ತ್ರ, ವಾಯುಶಾಸ್ತ್ರ, ವಾಸ್ತು, ಶಿಲ್ಪ ಮುಂತಾದ ಲೌಕಿಕ ವಿದ್ಯೆಗಳನ್ನು ಕಲಿಸಲಾಗುತ್ತಿತ್ತು. ಇಲ್ಲಿ ಮೂರು ಸಾವಿರ ವಿದ್ಯಾರ್ಥಿಗಳಿದ್ದರು. ಒಂದು ಸಾವಿರ ವಿವಿಧ ಶ್ರೇಣಿಯ ಆಚಾರ್ಯರು ಇರುತ್ತಿದ್ದರು. ಎಲ್ಲಾ ಆಚಾರ್ಯರುಗಳಿಗೆ ಅವರವರ ಶ್ರೇಣಿಗೆ ತಕ್ಕಂತೆ ವಸತಿ ವ್ಯವಸ್ಥೆಗಳೂ ಇರುತ್ತಿದ್ದವು. ವಿದ್ಯಾರ್ಥಿಗಳು ಉಳಿಯಲು ನಾಲ್ಕಾರು ವಿದ್ಯಾರ್ಥಿನಿಲಯಗಳು ಇದ್ದವು. ಪ್ರತಿಯೊಬ್ಬ ವಿದ್ಯಾರ್ಥಿಗೂ ಒಂದೊಂದು ಕೊಠಡಿಗಳಿದ್ದು, ಕಲ್ಲಿನಿಂದಲೇ ಕೊರೆದು ಮಾಡಿದ ಮಂಚಗಳು ಇರುತ್ತಿದ್ದದ್ದು ಒಂದು ವಿಶೇಷ.

ಈ ವಿಶ್ವವಿದ್ಯಾಲಯದ ಖ್ಯಾತಿ ದೇಶ–ವಿದೇಶಗಳಿಗೆ ಹಬ್ಬಿದ್ದಿತು. ಅನೇಕ ವಿದೇಶೀಯ ವಿದ್ಯಾರ್ಥಿಗಳು ಇಲ್ಲಿಗೆ ವ್ಯಾಸಂಗಕ್ಕಾಗಿ ಬರುತ್ತಿದ್ದರು. ಚೀನಾ, ಟಿಬೆಟ್, ಕೊರಿಯಾ, ಜಪಾನ್, ಜಾವ, ಚಂಪಾ, ಕಾಂಬೋಡಿಯಾ, ಮಧ್ಯಏಷ್ಯಾ, ಖೋಟಾನ್, ಕರಶಹರ್, ಬರ್ಮಾ, ಸಿಂಹಳ, ಥೈಲ್ಯಾಂಡ್, ಮುಂತಾದ ಕಡೆಗಳಿಂದ ವಿದ್ಯಾರ್ಥಿಗಳು ವಿಶ್ವವಿದ್ಯೆಯನ್ನು ಕಲಿಯಲು ಬರುತ್ತಿದ್ದರು. ಚೀನಿ ಯಾತ್ರಿಕರಾದ ಹ್ಯುಯೆನ್‌ತ್ಸಾಂಗ್ ಮತ್ತು ಇತ್ಸಿಂಗ್ ಇವರಿಬ್ಬರು ಇಲ್ಲಿ ವಿದ್ಯಾಭ್ಯಾಸ ಮಾಡಿ ಸಂಸ್ಕೃತ ಪ್ರಾಕೃತ ಮತ್ತು ಪಾಲಿಭಾಷೆಗಳ ನೂರಾರು ಗ್ರಂಥಗಳನ್ನು ಚೀನಿ ಭಾಷೆಗೆ ಅನುವಾದ ಮಾಡಿದ್ದು ಚಾರಿತ್ರಿಕ ಸಂಗತಿ. ಆ ಕಾಲಕ್ಕೆ ನಾಲಂದ ವಿಶ್ವವಿದ್ಯಾಲಯಕ್ಕೆ ಪ್ರವೇಶ ಪಡೆಯುವುದು ಕಷ್ಟಕರವಾಗಿತ್ತು. ವಿದ್ಯಾರ್ಥಿಗಳಿಗೆ ಪ್ರವೇಶಪರೀಕ್ಷೆ ಕಡ್ಡಾಯವಾಗಿ ಇರುತ್ತಿತ್ತು. ಲಿಖಿತ ಹಾಗೂ ಮೌಖಿಕ ಪರೀಕ್ಷೆ ಕಡ್ಡಾಯವಾಗಿ ಇರುತ್ತಿದ್ದದ್ದು ಒಂದು ವಿಶೇಷ. ಈಗ ಪ್ರವೇಶ ಪರೀಕ್ಷೆ ಇರುವಂತೆ ಆಗಲೂ ಇರುತ್ತಿತ್ತು.

ವಿಶ್ವವಿದ್ಯಾಲಯದ ಪ್ರವೇಶ ಪಡೆಯಲು ಬರುವವರಿಗೆ ಲಿಖಿತ–ಮೌಖಿಕ ಹಾಗೂ ಗುಂಪು ಚರ್ಚೆಗಳಲ್ಲಿ ಭಾಗವಹಿಸಬೇಕಾಗಿತ್ತು. ಇಲ್ಲಿ ಪ್ರಧಾನವಾಗಿ ನೈತಿಕಶಿಕ್ಷಣ ನೀಡಲಾಗುತ್ತಿತ್ತು. ಆಚಾರ್ಯರು–ವಿದ್ಯಾರ್ಥಿಗಳಿಗೆ ಅಗತ್ಯವಾಗಿ ಬೇಕಾದ ಮೂರು ಬಗೆಯ ಗ್ರಂಥಾಲಯಗಳು ಇದ್ದುವು. ರತ್ನೋದಧಿ, ರತ್ನಗಾರ, ರತ್ನಕರಂಡಕ ಎಂಬ ಹೆಸರಿನ ಐದು ಅಂತಸ್ತಿನ ಕಟ್ಟಡಗಳಲ್ಲಿ ಗ್ರಂಥಾಲಯವಿದ್ದು ಸಾವಿರಾರು ತಾಳೆಗರಿಗಳು ಅಲ್ಲಿದ್ದವು. ಅಲ್ಲಿ ಹಸ್ತಪ್ರತಿಗಳನ್ನು ಪ್ರತಿ ಮಾಡಲಾಗುತ್ತಿತ್ತು. ಆ ಹಸ್ತಪ್ರತಿಗಳನ್ನು ದೇಶ–ವಿದೇಶಗಳ ಶಿಕ್ಷಣ ಸಂಸ್ಥೆಗಳಿಗೆ ದಾನರೂಪವಾಗಿ ಕೊಡಲಾಗುತ್ತಿತ್ತು. ಚೀನಿಯಾತ್ರಿಕ ಹ್ಯುಯನ್‌ತ್ಸಾಂಗ್ ನೂರಾರು ಹಸ್ತಪ್ರತಿಗಳನ್ನು ತೆಗೆದುಕೊಂಡು ಹೋದದ್ದಕ್ಕೆ ದಾಖಲೆಗಳಿವೆ. ಸಂಸ್ಕೃತಪ್ರಾಕೃತ–ಪಾಲಿ ಭಾಷೆಯ ಗ್ರಂಥಗಳನ್ನು ಚೀನಿ ಮತ್ತು ಟಿಬೆಟ್ ಭಾಷೆಗೆ ಅನುವಾದಿಸಲಾಗುತ್ತಿತ್ತು. ಭಾರತದಲ್ಲಿ ಸಿಗದಿರುವ ಅಪೂರ್ವ ಹಸ್ತಪ್ರತಿಗಳು ಚೀನಾ ಮತ್ತು ಟಿಬೆಟ್ ಗ್ರಂಥಾಲಯಗಳಲ್ಲಿ ಇವೆಯೆಂದು ಮಹಾಪಂಡಿತ ರಾಹುಲ ಸಾಂಕೃತ್ಯಾಯನರು ದಾಖಲಿಸಿದ್ದಾರೆ.

ತಕ್ಷಶಿಲಾ ವಿಶ್ವವಿದ್ಯಾಲಯವು ಭಾಷೆ ಮತ್ತು ಶಿಲ್ಪಗಳಿಗೆ ಪ್ರಾಮುಖ್ಯತೆ ಕೊಡುತ್ತಿತ್ತು. ಗಾಂಧಾರ–ಪಾಟಲಿಪುತ್ರ–ತಕ್ಷಶಿಲಾ ಪ್ರದೇಶಗಳು ವಿದ್ವಾಂಸರಿಂದ, ಶಿಲ್ಪಿಗಳಿಂದ, ಭಾಷಾಕೋವಿದರಿಂದ ತುಂಬಿ ತುಳುಕಾಡುತ್ತಿತ್ತು. ಟಿಬೆಟ್, ಚೀನಾ, ಜಾವದ ರಾಜರುಗಳು ಒಂದೊಂದು ಅತಿಥಿಗೃಹವನ್ನು ನಾಲಂದದಲ್ಲಿ ಕಟ್ಟಿಕೊಟ್ಟಿದ್ದರು. ಈ ವಿಶ್ವವಿದ್ಯಾಲಯದ ಆಚಾರ್ಯ ಶಾಂತರಕ್ಷಿತನು ಟಿಬೆಟ್ಟಿನ ದೊರೆಯ ಪ್ರಾರ್ಥನೆಯ ಮೇರೆಗೆ ಟಿಬೆಟ್ಟಿನಲ್ಲಿ ಶಿಕ್ಷಣ ಕೇಂದ್ರವೊಂದನ್ನು ಸ್ಥಾಪಿಸಿ, ಹದಿಮೂರು ವರ್ಷಗಳ ಕಾಲ ಆಚಾರ್ಯ ಸ್ಥಾನದಲ್ಲಿದ್ದನು. ಇಂಥ ಅಪೂರ್ವ ವಿಶ್ವವಿದ್ಯಾಲಯವು ವಿದೇಶೀ ದಾಳಿಕೋರರಿಂದ ಸಂಪೂರ್ಣ ನಾಶವಾದದ್ದು ಒಂದು ದೊಡ್ಡ ದುರಂತ.

ವಿಶ್ವವಿದ್ಯಾಲಯಗಳ ಈಗಿನ ಕಲ್ಪನೆಯನ್ನು ಎರಡು ಸಾವಿರ ವರ್ಷಗಳ ಹಿಂದೆಯೇ ನಾಲಂದ, ತಕ್ಷಶಿಲೆಗಳು ಹೊಂದಿದ್ದವು ಎಂಬುದನ್ನು ನೆನೆದಾಗ ನಾವು ಪುಳಕಿತರಾಗುತ್ತೇವೆ. ನಾಲಂದ ವಿಶ್ವವಿದ್ಯಾಲಯವು ಮರಳಿ ಪ್ರಾಚೀನ ವೈಭವವನ್ನು ಪಡೆಯಬೇಕಾಗಿದೆ. ನಾವು ನಿಜವಾದ ವಿಶ್ವವಿದ್ಯೆಯ ವಾರಸುದಾರರು ಆಗಬೇಕಾಗಿದೆ.

■ ಪುರಂಜೀವಿ

## ಮಾತೇ ಮುತ್ತು

- ಅಂದಂದಿನ ಕೆಲಸವನ್ನು ಅಂದಂದು ಮಾಡಿ, ಅದರ ವಿಷಯವಾಗಿ ಬಹಳವಾಗಿ ಚಿಂತೆ ಮಾಡದೆ ಇರಬೇಕು. ಅದೇ ಒಳ್ಳೆಯ ಜೀವನ.
  —ಮಾಸ್ತಿ ವೆಂಕಟೇಶ ಅಯ್ಯಂಗಾರ್
- ನಮ್ಮನ್ನು ನಾವು ಸರಿ ಮಾಡಿಕೊಂಡರೆ ಇಡೀ ಜಗತ್ತನ್ನು ಸರಿಮಾಡಿಕೊಂಡಂತೆ ನಮ್ಮಲ್ಲಿ ನಾವು ಪರಿವರ್ತನೆ ಮಾಡಿಕೊಂಡರೆ ಜಗತ್ತಿಗೆ ಬೆಳಕು ನೀಡಿದಂತೆ.
  —ರಮಣ ಮಹರ್ಷಿ
- ವಿಪರೀತ ದಾಕ್ಷಿಣ್ಯ ಮತ್ತು ಸಂಕೋಚಗಳ ಅಣ್ಣ ಕರ್ನಾಟಕ ಮತ್ತು ಕನ್ನಡದ ವಿಷಯ ಬಂದಾಗ ಮಾತ್ರ ಯಾವುದೇ ಮುಲಾಜನ್ನೂ ತೋರಿಸಿದ್ದು ನನಗೆ ಕಂಡಿಲ್ಲ.
  — ಕೆ.ಪಿ. ಪೂರ್ಣಚಂದ್ರ ತೇಜಸ್ವಿ
- ಗುರು ಎಂದರೆ ವ್ಯಕ್ತಿಯಲ್ಲ, ಒಂದು ಶಕ್ತಿ. ಅಜ್ಞಾನದ ಕತ್ತಲೆಯ ಕಳೆದು ಸುಜ್ಞಾನದೆಡೆಗೆ ಕರೆದುಕೊಂಡು ಹೋಗುವ ಶಬ್ದವೇ ಗುರು.
  —ಸ್ವಾಮಿ ವಿವೇಕಾನಂದ